ಪಡಿಪಾಟಲು ಅನುಭವಿಸಿದ್ದ ಅವರು 49ನೇ ವಯಸ್ಸಿನಲ್ಲಿ ಬೇರೆ ಬಾಲಕಿಯ ಕಥನದಲ್ಲೇ ತನ್ನ ಬಾಲ್ಯವನ್ನೂ ಮರುಕಂಡಿದ್ದು ಸರಳ ಸಂಗತಿಯಲ್ಲ.

'ನೊಜೂದ್' ಎಂದರೆ 'ಬಚ್ಚಿಟ್ಟ' ಎಂಬ ಅರ್ಥವಿದೆ. ಅದನ್ನು ನಿರ್ದೇಶಕಿ 'ನೊಜೂಮ್' ಎಂದು ಬದಲಿಸಿರುವುದರಲ್ಲಿಯೇ ಭಾವೋದ್ದೇಶವಿದೆ. 'ನೊಜೂಮ್' ಎಂದರೆ 'ನಕ್ಷತ್ರಗಳನ್ನು ಇಷ್ಟಪಡುವವಳು' ಎಂದರ್ಥ. ಈ ಅರ್ಥವನ್ನು ಚಿತ್ರ ಇನ್ನಷ್ಟು ಹಿಗ್ಗಿಸಿ, ನಕ್ಷತ್ರವನ್ನು ಎಟುಕಿಸಿಕೊಳ್ಳುವ ಬಾಲಕಿಯನ್ನಾಗಿ ನೊಜೂಮ್‌ಳನ್ನು ತೋರಿರುವುದು ಹೆಚ್ಚುಗಾರಿಕೆ.

ಚಿತ್ರದ ವಸ್ತು ಅತಿ ಸಂಕೀರ್ಣ, ಸೂಕ್ಷ್ಮ. ಸಿನಿಮಾ ಮಾಡಲು ಖದಿಜಾ ಯೋಚಿಸಿದಾಗ ಯೆಮೆನ್‌ನ ಮೂವರು ಬಾಲಕಿಯರಲ್ಲಿ ಒಬ್ಬಳಿಗೆ 10 ವರ್ಷಕ್ಕಿಂತ ಮೊದಲು ಮದುವೆ ಆಗುತ್ತಿತ್ತು. 15 ವರ್ಷದ ಏಳು ಬಾಲಕಿಯರಲ್ಲಿ ಒಬ್ಬಳು ವಿವಾಹ ಬಂಧನಕ್ಕೆ ಸಿಲುಕುತ್ತಿದ್ದಳು. ಈ ಅಂಕಿ–ಅಂಶ 'ಯುನಿಸೆಫ್'ನದ್ದು. ಬಾಲ್ಯವಿವಾಹ ನಿಷೇಧಕ್ಕೆ ಅಲ್ಲಿ ಕಾನೂನೂ ಇರಲಿಲ್ಲ. ಬುಡಕಟ್ಟು ಜನಾಂಗಗಳ ಎಷ್ಟೋ ಅಪ್ಪ–ಅಮ್ಮಂದಿರುವ ತಮ್ಮ ಹೆಣ್ಣುಮಕ್ಕಳಿಗೆ ಚಿಕ್ಕ ವಯಸ್ಸಿನಲ್ಲೇ ಮದುವೆ ಮಾಡಿ ಕೈತೊಳೆದುಕೊಂಡರೆ ನಿರಾಳ ಎಂದು ಭಾವಿಸುತ್ತಿದ್ದರು. ತಮ್ಮ ಅರೆ ಅಲೆಮಾರಿ ಬದುಕಿನಲ್ಲಿ ಬಾಲಕಿಯರ ಶೀಲ ರಕ್ಷಿಸಿಕೊಳ್ಳುವುದು ದೊಡ್ಡ ಸವಾಲು ಎಂಬ ಸಮರ್ಥನೆಯೂ ಅವರಿಗಿತ್ತು. ಮದುವೆ ಅದಕ್ಕೆ ಪರಿಹಾರವೆಂದು ಅಂಥವರು ಭಾವಿಸಲು

